
ಕಳೆಯೂ ಒಂದು ಹೂವೇ

ಜಾರ್ಜ್ ವಾಷಿಂಗ್ಟನ್ ಕಾರ್ವರ್

ಅವರ ಕಥೆ





ಜಾರ್ಜ್ ವಾಷಿಂಗ್ಟನ್ ಕಾರ್ವರ್ ಅವರು ಹುಟ್ಟಿದಾಗ ಅವರ ಸ್ಥಿತಿ ದಯನೀಯವಾಗಿತ್ತು. ಅವರು ಕಾಯಿಲೆಪೀಡಿತ, ದುರ್ಬಲ ಮತ್ತು ಸಣಕಲ ಮಗುವಾಗಿದ್ದರು. ಅವರ ತಂದೆಯವರು ತೀರಿಹೋಗಿದ್ದರು. ತಾಯಿ ಒಬ್ಬರೇ ಅವರನ್ನು ಮತ್ತು ಅವರ ಅಣ್ಣ ಜೇಮ್ಸ್ ನನ್ನು ನೋಡಿಕೊಳ್ಳುತ್ತಿದ್ದರು. ಗುಲಾಮರ ಮನೆಯಲ್ಲಿ ಹುಟ್ಟಿದ್ದು ಇವೆಲ್ಲಕ್ಕಿಂತ ಕೆಟ್ಟ ವಿಷಯವಾಗಿತ್ತು. ಒಳ್ಳೆಯ ಭವಿಷ್ಯ ಅವರದ್ದಾಗುತ್ತದೆ ಎಂಬ ಯಾವ ಆಸೆಯೂ ಇಟ್ಟುಕೊಳ್ಳುವಂತಿರಲಿಲ್ಲ.


ಆದರೆ ಜಾರ್ಜ್ ವಾಷಿಂಗ್ಟನ್ ಕಾರ್ವರ್ ಸಾಧಾರಣ ಮನುಷ್ಯನಾಗಿರಲಿಲ್ಲ. ಕೆಟ್ಟದರಲ್ಲಿಯೂ ಒಳಿತು, ಹತಾಶೆಯಲ್ಲೂ ಭರವಸೆ, ದ್ವೇಷದಲ್ಲೂ ಪ್ರೀತಿಯನ್ನು ಹುಟ್ಟುಹಾಕುವಂತಹ ವ್ಯಕ್ತಿತ್ವ ಅವರದ್ದಾಗಿತ್ತು.

ಇಂತಹ ಮಹಾನ್ ವ್ಯಕ್ತಿಯ ಕಥೆ ಇದು.

ನೂರೈವತ್ತು ವರ್ಷಕ್ಕೂ ಕೆಳಗೆ, 1860 ರಲ್ಲಿ ಉತ್ತರ ಅಮೇರಿಕಾ ದೇಶದ ಮಿಸ್ಸೂರಿ ರಾಜ್ಯದಲ್ಲಿ ಜಾರ್ಜ್ ವಾಷಿಂಗ್ಟನ್ ಕಾರ್ವರ್ ಅವರ ಜನನವಾಯಿತು. ಅದೊಂದು ಕರಾಳವಾದ ಸಮಯವಾಗಿತ್ತು. ಡಕಾಯಿತರು ಗುಲಾಮರನ್ನು ಅವರ ಮಾಲೀಕರಿಂದ ಕದ್ದೊಯ್ದುಬಿಡುತ್ತಿದ್ದರು. ಯಾರಾದರೂ ಅವರನ್ನು ತಡೆಗಟ್ಟಿದರೆ ಅವರನ್ನು ಸುಮ್ಮನೆ ಬಿಡುತ್ತಿರಲಿಲ್ಲ.


ಒಂದು ರಾತ್ರಿ, ಜಾರ್ಜ್ ಮತ್ತು ಅವರಮ್ಮ ಮೇರಿ ಅವರ ಮಾಲೀಕ ಮೋಸಸ್ ಕಾರ್ವರ್ ಅವರ ಹೊಲಕ್ಕೆ ಡಕಾಯಿತರ ಗುಂಪೊಂದು ನುಗ್ಗಿತು. ಡಕಾಯಿತರನ್ನು ನೋಡಿ ಎಲ್ಲರೂ ಓಡಿಹೋದರು. ಮೇರಿ ಮಗುವನ್ನು ಅಡಗಿಸುತ್ತಿರುವಾಗ ಡಕಾಯಿತರು ಜಾರ್ಜ್ ಮತ್ತು ಮೇರಿ ಇಬ್ಬರನ್ನೂ ಎತ್ತುಕೊಂಡು ಕತ್ತಲಲ್ಲಿ ಪರಾರಿಯಾದರು.






ಅವರನ್ನು ಹುಡುಕಲು ಮೋಸಸ್ ಕಾರ್ವರ್ ತನ್ನೊಬ್ಬ ಮನುಷ್ಯನನ್ನು ಕಳಿಸಿದನು. ಎಷ್ಟು ಹುಡುಕಿದರೂ ಮೇರಿ ಮಾತ್ರ ಸಿಗಲೇ ಇಲ್ಲ. ಸ್ವಲ್ಪ ದಿನಗಳ ನಂತರ ಆ ಮನುಷ್ಯ ಒಂದು ಚಿಕ್ಕ ಮುದ್ದೆಯನ್ನು ತನ್ನ ಕೋಟಿನಲ್ಲಿ ಸುತ್ತಿಕೊಂಡು, ಹೆಗಲ ಮೇಲೆ ಹೊತ್ತುಕೊಂಡು ಬಂದನು. ಅದೇ ಪುಟ್ಟ ಜಾರ್ಜ್.


ಮೋಸಸ್ ಮತ್ತು ಅವನ ಪತ್ನಿ ಸೂಸನ್ ಎರಡೂ ಮಕ್ಕಳನ್ನು ನೋಡಿಕೊಂಡರು. ಜಾರ್ಜ್ ಮೊದಲಿನಿನಂತೆಯೇ ದುರ್ಬಲನಾಗಿಯೇ ಇದ್ದ. ಆದರೆ ಅವನು ದೊಡ್ಡವನಾದಂತೆ ಅವನ ಅಸಾಧಾರಣತೆ ಕಾಣತೊಡಗಿತು. ಸುತ್ತಲಿರುವ ಎಲ್ಲಾ ವಿಷಯಗಳ ಬಗ್ಗೆಯೂ ತಿಳಿದುಕೊಳ್ಳುವ ತವಕ ಅವನಲ್ಲಿತ್ತು. ಮಳೆ, ಹೂವು, ಕೀಟ ಎಲ್ಲದರ ಬಗ್ಗೆಯೂ ಅವನು ಪ್ರಶ್ನೆ ಕೇಳುತ್ತಿದ್ದ. ಅವನಲ್ಲೆಷ್ಟು ಪ್ರಶ್ನೆಗಳಿದ್ದವೆಂದರೆ ಕಾರ್ವರ್ ದಂಪತಿಗಳಿಗೆ ಅವನ ಎಷ್ಟೋ ಪ್ರಶ್ನೆಗಳಿಗೆ ಉತ್ತರಗಳೇ ಸಿಗುತ್ತಿರಲಿಲ್ಲ.





ಚಿಕ್ಕವನಿರುವಾಗ ಜಾರ್ಜ್ ತನ್ನದ್ದೇ ಆದ ಒಂದು ಚಿಕ್ಕ ತೋಟವೊಂದನ್ನು ಮಾಡಿದ್ದ. ಅಲ್ಲಿ ಗಿಡಗಳಿಗೆ ಆರೈಕೆ ಮಾಡುತ್ತ ದಿನಾ ಸ್ವಲ್ಪ ಹೊತ್ತು ಕಾಲ ಕಳೆಯುತ್ತಿದ್ದ. ಗಿಡಗಳು ಸರಿಯಾಗಿ ಬೆಳೆಯಲಿಲ್ಲವೆಂದರೆ, ಯಾಕೆಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ. ಅಲ್ಲಿನ ಗಿಡಗಳು ಚೆನ್ನಾಗಿ ಬೆಳೆದು ನಳನಳಿಸುತ್ತಿದ್ದವು. ಚಳಿಗಾಲದಲ್ಲಿ ಅವುಗಳಿಗೆ ಹೊದೆಸಿ ವಿಪರೀತ ಚಳಿಯಿಂದ ಅವುಗಳನ್ನು ರಕ್ಷಿಸುತ್ತಿದ್ದ. ವಸಂತ ಕಾಲದಲ್ಲಿ ಹೊಸ ಬೀಜ, ಗಿಡಗಳನ್ನು ನೆಡುತ್ತಿದ್ದ. ಅಷ್ಟೊಂದು ಗಿಡಗಳಿದ್ದರೂ ಪ್ರತಿಯೊಂದು ಗಿಡವನ್ನು ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದ.

ಕೆಲವೇ ದಿನಗಳಲ್ಲಿ ಅಕ್ಕಪಕ್ಕದ ಮನೆಯವರೆಲ್ಲಾ ತಮ್ಮ ಗಿಡಗಳ ಬಗ್ಗೆ ಜಾರ್ಜ್ ನ ಸಲಹೆ ಕೇಳಲು ಶುರು ಮಾಡಿದರು. ಅವನು “ಪ್ಲ್ಯಾನ್ಟ್ ಡಾಕ್ಟರ್”, ಅಂದರೆ “ಗಿಡಗಳ ವೈದ್ಯ” ಎಂದೇ ಹೆಸರುವಾಸಿಯಾದ.




ದೊಡ್ಡವನಾದಂತೆ ಅವನ ಕೂತೂಹಲವೂ
ಹೆಚ್ಚಾಗತೊಡಗಿತು. ಶಾಲೆಗೆ ಹೋಗಬೇಕು
ಹೆಚ್ಚು ಹೆಚ್ಚು ಕಲಿಯಬೇಕು ಎನ್ನುವ ಆಸೆ
ಅವನಲ್ಲಿ ಹುಟ್ಟಿತು.

ಅಷ್ಟೊತ್ತಿಗಾಗಲೇ ಉತ್ತರ ಅಮೆರಿಕಾದಲ್ಲಿ
ಗುಲಾಮರನ್ನೆಲ್ಲ ಸ್ವತಂತ್ರಗೊಳಿಸಿದ್ದರು. ಆದರೆ
ನೀಗ್ರೋ ಮಕ್ಕಳಿಗೆ ಅಲ್ಲಿಯ ಶಾಲೆಗಳ
ಬಾಗಿಲಿನ್ನೂ ತೆರೆದಿರಲಿಲ್ಲ.
ಆದ್ದರಿಂದ ಹತ್ತು ವರ್ಷದವನಿದ್ದಾಗ ಜಾರ್ಜ್
ಅಣ್ಣನನ್ನೂ, ತೋಟವನ್ನೂ ಮತ್ತು ಮೊಸಸ್
ಪರಿವಾರವನ್ನೂ ತೊರೆದು ತನ್ನ ಪ್ರಶ್ನೆಗಳಿಗೆ
ಉತ್ತರ ಹುಡುಕಲು ಹೊರಟ.

ಜಾರ್ಜ್ ವಾಷಿಂಗ್ಟನ್ ಕಾರ್ವರ್ ಗೆ ಎಲ್ಲೆಲ್ಲಿ ಶಾಲೆಗಳು ಸಿಕ್ಕವೋ ಅಲ್ಲೆಲ್ಲ ಇದ್ದು ಕಲಿತ. ಬೇರೆ ಬೇರೆ ಮನೆಯಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿ ತನ್ನ ಖರ್ಚನ್ನೂ, ಶಾಲೆಯ ಫೀಸನ್ನೂ ಸಂಪಾದಿಸುತ್ತಿದ್ದ. ಗುಡಿಸಿ ಸಾರಿಸುವುದು, ಬಟ್ಟೆ ತೊಳೆಯುವುದು, ಅಡಿಗೆ ಮಾಡುವುದು ಎಲ್ಲಾ ಕೆಲಸವನ್ನು ಅತ್ಯಂತ ಮುತುವರ್ಜಿಯಿಂದ ಮಾಡುತ್ತಿದ್ದ. ಯಾವ ಸಣ್ಣ ಕೆಲಸದಲ್ಲೂ ನಿರ್ಲಕ್ಷ ತೋರುತ್ತಿರಲಿಲ್ಲ.

ಎಷ್ಟೋ ಜನರು ಅವನನ್ನು ತಮ್ಮ ಮಗನಂತೆ ನೋಡಿಕೊಂಡರು. ಮೊದಲಿಗೆ ಸ್ವಲ್ಪ ದಿನ, ಮರಿಯಾ ಮತ್ತು ಆಂಡಿ ವಾಟ್ಕಿನ್ಸ್ ದಂಪತಿಗಳೊಂದಿಗೆ ಅವರ ಮಗನಂತೆ ಇದ್ದ. ನಂತರ ಕ್ಯಾನ್ಸಸ್ನಲ್ಲಿ ಲೂಸಿ ಮತ್ತು ಸೇಮೂರ್ ದಂಪತಿಗಳೊಂದಿಗೂ ಸ್ವಲ್ಪ ಕಾಲ ಇದ್ದ. ಅಲ್ಲಿಯೂ ಅಷ್ಟೇ, ಅಚ್ಚುಕಟ್ಟಾಗಿ ಕೆಲಸ ಮಾಡುವ ಶಾಂತ ಸ್ವಭಾವದ ಈ ಹುಡುಗ ಎಂದರೆ ಎಲ್ಲರಿಗೂ ಪ್ರೀತಿ.





ಬಹಳ ವರ್ಷಗಳವರೆಗೆ ಜಾರ್ಜ್ ಕಷ್ಟಪಟ್ಟು ದುಡಿದು, ಸಂಪಾದಿಸಿ, ಕಾಲೇಜಿಗೆಂದು ದುಡ್ಡು ಉಳಿಸಿಡುತ್ತಿದ್ದ. ದುಡ್ಡಿದ್ದವರ ಮಕ್ಕಳು ಬಹಳ ಬೇಗನೇ ಕಾಲೇಜಿಗೆ ಸೇರಿಕೊಂಡರು. ಕಾಲೇಜಿಗೆ ಸಾಕಾಗುವಷ್ಟು ಸಂಪಾದಿಸುವಷ್ಟರಲ್ಲಿ ಜಾರ್ಜ್ ಗೆ ಮೂವತ್ತು ವರ್ಷ. ದುಡ್ಡಿದ್ದರೂ ಕಾಲೇಜಿಗೆ ಸೇರಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಎಷ್ಟೋ ಕಾಲೇಜುಗಳಲ್ಲಿ ನೀಗ್ರೋ ಜನರಿಗೆ, ಫೀಸ್ ಕೊಟ್ಟರೂ ಸಹ, ಪ್ರವೇಶವಿರಲಿಲ್ಲ.

ಜಾರ್ಜ್ ಧೃತಿಗೆಡಲಿಲ್ಲ. ಐಯೋವಾದಲ್ಲಿ ಒಂದು ಕಾಲೇಜಿನಲ್ಲಿ ನೀಗ್ರೋಗಳನ್ನು ಖುಷಿಯಿಂದ ಸೇರಿಸಿಕೊಳ್ಳುತ್ತಾರೆಂದು ತಿಳಿದು, ಅಲ್ಲಿಗೆ ಹೋದ.

ಕಾಲೇಜಿನಲ್ಲಿಯೂ ಜಾರ್ಜ್ ಕೆಲಸ ಮಾಡಿ ಸಂಪಾದಿಸುವುದನ್ನು ಬಿಡಲಿಲ್ಲ. ಧೋಭಿಖಾನೆಯೊಂದನ್ನು ತೆರೆದು ತನ್ನೆಲ್ಲಾ ಸಹಪಾಠಿಗಳ ಬಟ್ಟೆ ಒಗೆದುಕೊಡುತ್ತಿದ್ದ.

ಹೀಗೆ ಅವನು ತನ್ನ ಕಲಿಕೆಯನ್ನು ಮುಂದುವರೆಸಿದ. ಅವನ ಗುರುಗಳು ಮತ್ತು ಸ್ನೇಹಿತರು ಅವನು ಶ್ರದ್ಧಾವಂತನಷ್ಟೇ ಅಲ್ಲ ಪ್ರತಿಭಾವಂತನೂ ಕೂಡ ಎಂಬುದನ್ನು ಬಲುಬೇಗ ತಿಳಿದುಕೊಂಡರು. ಪಿಯಾನೋ ಬಾರಿಸುತ್ತಿದ್ದ, ಸುಂದರವಾಗಿ ಹಾಡುತ್ತಿದ್ದ, ಅತ್ಯುತ್ತಮವಾಗಿ ಚಿತ್ರಕಲೆಯನ್ನೂ ಮಾಡುತ್ತಿದ್ದ. ತಾನೊಂದು ಚಿತ್ರಕಾರನೇ ಆಗುತ್ತೇನೆಂದು ಸ್ವಲ್ಪ ದಿನ ವಿಚಾರ ಕೂಡ ಮಾಡಿದ್ದ.






ತಾನೇನಾಗಬೇಕೆಂದು ಯೋಚಿಸಿದಾಗೆಲ್ಲ, ತನ್ನ ಜನರಿಗಾಗಿ ಏನಾದರೂ ಮಾಡಬೇಕೆಂದು ಜಾರ್ಜ್ ಗೆ ಅನಿಸುತ್ತಿತ್ತು. ಗಿಡಗಳ ವೈದ್ಯ ಎಂದು ಅಕ್ಕಪಕ್ಕದವರು ತನ್ನನ್ನು ಕರೆಯುತ್ತಿದ್ದುದ್ದನ್ನು ನೆನೆಸಿಕೊಳ್ಳುತ್ತಿದ್ದ.
ಗಿಡಗಳ ಮೇಲಿನ ಪ್ರೀತಿಯನ್ನು ಅವನು ಯಾವತ್ತೂ ಮರೆಯಲಿಲ್ಲ.
ವರ್ಷಾನುಗಟ್ಟಲೆ ಎಲ್ಲೆಲ್ಲೋ ಅಲೆದಾಡಿಕೊಂಡಿದ್ದರೂ ಅವನ ಕೋಣೆಯಲ್ಲಿ ಮಾತ್ರ ಯಾವುದಾರೊಂದು ಗಿಡ ಇದ್ದೇ ಇರುತ್ತಿತ್ತು.
ಹೀಗಾಗಿ ಜಾರ್ಜ್ ವಾಷಿಂಗ್ಟನ್ ಕಾರ್ವರ್ ನು ಕೃಷಿ ಅಧ್ಯಯನ ಮಾಡಲು ನಿರ್ಧರಿಸಿದ. ಸಸ್ಯ, ಹೂವು ಮತ್ತು ಮಣ್ಣು ಇವುಗಳನ್ನೇ ಅಭ್ಯಸಿಸಿದ. ಕಳೆ ಗಿಡಗಳ ಬಗ್ಗೆಯೂ ಕಲಿತ. ಅವೂ ಕೂಡ ಅವನಿಗೆ ಮಹತ್ವದ್ದಾಗಿದ್ದವು. ‘ಕಳೆ ತಪ್ಪು ಜಾಗದಲ್ಲಿ ಬೆಳೆಯುತ್ತಿರುವ ಒಂದು ಹೂವು’ ಎಂದು ಅವನು ಯಾವಾಗಲೂ ಹೇಳುತ್ತಿದ್ದ.
ಪ್ರಶ್ನೆ ಕೇಳುವುದನ್ನು ಮಾತ್ರ ಅವನು ಬಿಡಲಿಲ್ಲ. ಜನರಿಂದ ಅಥವಾ ಪುಸ್ತಕದಿಂದ ಉತ್ತರ ಸಿಗದಿದ್ದರೆ, ತಾನೇ ಉತ್ತರ ಕಂಡುಕೊಳ್ಳುತ್ತಿದ್ದ. ಗಿಡಗಳ ಮೇಲೆ ಪ್ರಯೋಗಗಳನ್ನು ಮಾಡಿ, ಯಾರಿಗೂ ಗೊತ್ತಿರದ ರಹಸ್ಯಗಳನ್ನು ಅರಿತ.



ಕಾಲೇಜಿನ ನಂತರ ಜಾರ್ಜ್ ಕಲಿಸಲು ಶುರುಮಾಡಿದರು. ಅಲಬಾಮಾದಲ್ಲಿ ನೀಗ್ರೋಗಳಿಗೆಂದೇ ಇರುವ ಕಾಲೇಜಿನಿಂದ ಅವರಿಗೆ ಕರೆ ಬಂತು. ಇದೇ 'ಟಸ್ಕಜೀ ಇನ್ಸ್ಟಿಟ್ಯೂಟ್' ನಲ್ಲಿ ಅವರು ಕಡೆವರೆಗೂ ತಮ್ಮ ಜೀವನ ನಡೆಸಿದರು.

ಅಲಬಾಮಾದಲ್ಲಿ, ಪ್ರೊಫೆಸ್ಸರ್ ಕಾರ್ವರ್ ಅವರು ತಮ್ಮ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಸುತ್ತಮುತ್ತಲಿನ ಬಡ ರೈತರಿಗೆ ಕೂಡ ಕಲಿಸತೊಡಗಿದರು. ಆ ರೈತರ ಬೆಳೆಯನ್ನು ಇನ್ನೂ ಉತ್ತಮಗೊಳಿಸಲು ಸಹಾಯ ಮಾಡಿದರು.





ಅಲ್ಲಿಯ ರೈತರೆಲ್ಲರೂ ಸುಮಾರಾಗಿ ಹತ್ತಿ ಬೆಳೆಯುತ್ತಿದ್ದರು. ಒಮ್ಮೊಮ್ಮೆ ಅವರ ಬೆಳೆಯೆಲ್ಲ ಮಳೆ ಅಥವಾ ಕೀಟದ ಭಾದೆಯಿಂದ ನಾಶವಾಗಿಬಿಡುತ್ತಿತ್ತು. ಆಗ ಆ ಬಡ ರೈತರ ಸಂಪಾದನೆ ಹೊಟ್ಟೆಪಾಡಿಗೂ ಸಾಕಾಗುತ್ತಿರಲಿಲ್ಲ.

ಅವರಿಗೆ ಪ್ರೊಫೆಸ್ಸರ್ ಕಾರ್ವರ್ ಹತ್ತಿಯೊಂದಿಗೆ ಬೇರೆ ಬೆಳೆಗಳನ್ನೂ ಬೆಳೆಯಲು ಹೇಳಿದರು. ಗೆಣಸು ಮತ್ತು ಶೇಂಗಾ(ಕಡಲೆಬೀಜ) ಒಳ್ಳೆಯ ಬೆಳೆಗಳು, ಸುಲಭವಾಗಿ ಬೆಳೆಯಬಹುದು. ಪ್ರತೀ ವರ್ಷ ಹತ್ತಿಯೊಂದನ್ನೇ ಬಿತ್ತಿದರೆ ಮಣ್ಣು ಹಾಳಾಗುತ್ತದೆ, ಅದಕ್ಕೆ ವರ್ಷದಿಂದ ವರ್ಷಕ್ಕೆ ಬೆಳೆಗಳನ್ನು ಬದಲಾಯಿಸಬೇಕು ಎಂದು ಕಾರ್ವರ್ ಅವರು ಅಲ್ಲಿನ ರೈತರಿಗೆ ಸಲಹೆ ನೀಡಿದರು.


ರೈತರಿಗೆ ಹಾಗೆ ಮಾಡಲಿಕ್ಕೆ ಹೆದರಿಕೆ. ಗೆಣಸು, ಶೇಂಗಾ ಇವುಗಳನ್ನು ಯಾರೂ ಖರೀದಿಸುವುದಿಲ್ಲ ಅಂತ ಅವರು ನಂಬಿದ್ದರು.




ಪ್ರೊಫೆಸ್ಸರ್ ಕಾರ್ವರ್ ಅವರು ತಮ್ಮ ಪ್ರಯೋಗಶಾಲೆಯಲ್ಲಿ ವಿಧವಿಧವಾದ ಪ್ರಯೋಗಗಳನ್ನು ನಡೆಸುತ್ತಲೇ ಇದ್ದರು. ಗೆಣಸಿನಿಂದ ಬಹಳಷ್ಟು ಸಾಮಾನುಗಳನ್ನು ತಯಾರಿಸಬಹುದು ಎಂದು ಕಂಡುಹಿಡಿದುಕೊಂಡಿದ್ದರವರು. ಸಾಬೂನು, ಕಾಫಿ, ಗಂಜಿ ಇಂತಹ ನೂರಾರು ವಸ್ತುಗಳನ್ನು ಅವರು ಗೆಣಸಿನಿಂದ ತಯಾರಿಸಿದ್ದರು.


ಆಗಿನ ಕಾಲದಲ್ಲಿ ಶೇಂಗಾಗೆ ಜನರು ‘ಮಂಗಗಳ ಆಹಾರ’ ಎಂದು ಕರೆಯುತ್ತಿದ್ದರು. ಅದು ಸರಿಯಲ್ಲ, ಅದೂ ಒಂದು ಒಳ್ಳೆಯ ಆಹಾರವೇ ಎಂದು ಪ್ರೊಫೆಸ್ಸರ್ ಕಾರ್ವರ್ ತಿಳಿಸಿಹೇಳಿದರು. ಶೇಂಗಾದಿಂದ ಶಾಯಿ, ಕ್ಷೌರದ ಕ್ರೀಮು, ಶಾಂಪೂ, ಬಟ್ಟೆ, ಸಾಸ್(ಬ್ರೆಡ್ಡಿಗೆ ಹಚ್ಚಿಕೊಳ್ಳುವ ರಸ), ಹಾಲನ್ನೂ ಮಾಡಬಹುದೆಂದು ತೋರಿಸಿಕೊಟ್ಟರು. ಸುಮಾರು ಮುನ್ನೂರು ವಿಧವಿಧ ಸಾಮಾನುಗಳನ್ನು ಶೇಂಗಾದಿಂದ ಮಾಡಿ ತೋರಿಸಿದರು.

ಒಮ್ಮೆಅವರ ಕಾಲೇಜಿಗೆ ಬಂದ ಅತಿಥಿಗಳಿಗೆಂದು ಕಾರ್ವರ್ ಅವರು ಅಡಿಗೆ ಮಾಡಿಸಿದ್ದರು. ಅತಿಥಿಗಳು ರುಚಿಕಟ್ಟಾದ ಸೂಪು, ಕೆನೆಭರಿತ ಚಿಕನ್, ಬ್ರೆಡ್ಡು, ಪಚ್ಚಡಿ, ಕಾಫಿ, ಸಿಹಿ ತಿನಿಸು, ಕೇಕು, ಐಸ್ ಕ್ರೀಮ್ ಎಲ್ಲವನ್ನೂ ಸವಿದ ಮೇಲೆ ಗೊತ್ತಾಯ್ತು, ಅಲ್ಲಿರುವ ಎಲ್ಲಾ ಪದಾರ್ಥಗಳನ್ನೂ ಶೇಂಗಾದಿಂದಲೇ ಮಾಡಿದ್ದು ಎಂದು!




ಬರುಬರುತ್ತ ಅಲ್ಲಿಯ ರೈತರು ಜಾರ್ಜ್ ವಾಷಿಂಗ್ಟನ್ ಕಾರ್ವರ್ ಅವರ ಮಾತನ್ನು ಕೇಳತೊಡಗಿದರು. ಶೇಂಗಾ ಮತ್ತು ಗೆಣಸುಗಳನ್ನು ಬೆಳೆದರು. ನೋಡುನೋಡುವಷ್ಟರಲ್ಲಿ ಇವೆರಡೂ ಅಲಬಾಮಾದ ಪ್ರಮುಖ ಬೆಳೆಗಳಾಗಿಬಿಟ್ಟವು.





ಡಾ. ಕಾರ್ವರ್ ಮತ್ತು ಅವರ ಅಮೋಘ ಕೆಲಸದ ಜನಪ್ರಿಯತೆ ಬಹುಬೇಗನೆ ದೇಶದಲ್ಲೆಲ್ಲಾ ಹಬ್ಬಿತು. ದೇಶದ ಅಧ್ಯಕ್ಷರಾದಿಯಾಗಿ ಎಲ್ಲರೂ ಅವರನ್ನು ಸನ್ಮಾನಿಸಿದರು. ಪ್ರತಿದಿನ ರೈತರ ಮತ್ತು ವಿಜ್ಞಾನಿಗಳ ಪತ್ರಗಳಿಂದ ಅವರ ಅಂಚೆಪೆಟ್ಟಿಗೆ ತುಂಬಿರುತ್ತಿತ್ತು. ಹೆಚ್ಚಿಗೆ ಸಂಪಾದಿಸುವ ಅವಕಾಶಗಳೂ ಬಹಳ ಬಂದವು. ಅವನ್ನೆಲ್ಲ ಅವರು ನಿರಾಕರಿಸಿದರು. ದುಡ್ಡಿಗೆ ಅವರು ಯಾವತ್ತೂ ಮಹತ್ವ ಕೊಡಲಿಲ್ಲ. ಎಷ್ಟೋ ಬಾರಿ, ಬಂದ ಬ್ಯಾಂಕ್ ಚೆಕ್ ಗಳನ್ನು ತಮ್ಮ ಖಾತೆಗೆ ಹಾಕುತ್ತಲೂ ಇರಲಿಲ್ಲ.

ಜೀವನಪರ್ಯಂತ ಡಾ. ಕಾರ್ವರ್ ಬೇರೆಯವರಿಂದ ಏನನ್ನೂ ಬಯಸಲಿಲ್ಲ. ಬೇರೆಯವರಿಗೆ ಸಹಾಯ ಮಾಡುವುದೊಂದೇ ಅವರ ಜೀವನದ ಉದ್ದೇಶವಾಗಿತ್ತು. ಒಬ್ಬರೇ ಇದ್ದು ತಮ್ಮೆಲ್ಲ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಬಟ್ಟೆಗಳನ್ನು ತೊಳೆದುಕೊಳ್ಳುವುದೂ ಅವರೇ, ಹರಿದರೆ ಹೊಲಿದುಕೊಳ್ಳುವುದೂ ಅವರೇ. ಅಗತ್ಯವಿದ್ದ ಸೋಪನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು, ಧಾನ್ಯಗಳನ್ನು ತಾವೇ ಬೆಳೆದುಕೊಳ್ಳುತ್ತಿದ್ದರು.



ಡಾ.ಕಾರ್ವರ್ ಗೆ ಜಗತ್ತಿನೆಲ್ಲೆಡೆಯಿಂದ ಭಾಷಣ ಮಾಡಲು ಕರೆ ಬಂದವು. ಆದರೆ ಟಸ್ಕಜಿ ಬಿಟ್ಟು ಹೋಗಲು ಅವರು ಇಷ್ಟಪಡುತ್ತಿರಲಿಲ್ಲ. ಅಲ್ಲಿಯೇ ಅವರಿಗೆ ಬೇಕಾದಷ್ಟು ಕೆಲಸಗಳಿದ್ದವು. ಚಿತ್ರಕಲೆಯನ್ನು ಮುಂದುವರೆಸಿದರು. ಹಸಿರುಮನೆ ಮತ್ತು ಪ್ರಯೋಗಾಲಯದಲ್ಲಿ ತೊಡಗಿಸಿಕೊಂಡು ಹೊಸತನ್ನೇನಾದರು ಕಂಡುಹಿಡಿಯುತ್ತಲೇ ಹೋದರು. ಗಿಡಗಳಿಂದ, ಅಲಬಾಮಾದ ಮಣ್ಣಿನಿಂದ ಬಣ್ಣ ತೆಗೆಬಹುದು ಎಂದು ತೋರಿಸಿಕೊಟ್ಟರು. ಎಂಬತ್ತನೇ ವಯಸ್ಸಿನ ಮುಪ್ಪಿನಲ್ಲೂ ಅವರು ಕೆಲಸಮಾಡುತ್ತಲೇ ಇದ್ದರು. ಇಡೀ ಊರೆಲ್ಲ ಮಲಗಿದರೂ ಇವರ ಕೋಣೆಯ ದೀಪವೊಂದು ಸದಾ ಉರಿಯುತ್ತಿರುತ್ತಿತ್ತು.

ಒಳ್ಳೆಯ ಭವಿಷ್ಯದ ಯಾವುದೇ ಭರವಸೆ ಇಲ್ಲದಂತೆ ಕಾಣುತ್ತಿದ್ದ ಚಿಕ್ಕ ಮಗುವೊಂದು, ಅಮೇರಿಕಾ ದೇಶದ ಅತ್ಯಂತ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬನಾಗಿ ಬೆಳೆದ. ತನ್ನ ಒಳ್ಳೆಯತನ, ನಿಷ್ಠೆ ಮತ್ತು ಶ್ರಮದಿಂದ ಜಾರ್ಜ್ ವಾಷಿಂಗ್ಟನ್ ಕಾರ್ವರ್, ಕೇವಲ ತನ್ನ ಜನರಿಗಷ್ಟೇ ಅಲ್ಲ, ಪ್ರಪಂಚದ ಎಲ್ಲಾ ಜನರಿಗೆ ಬೇಕಾದವನಾದ.



ಸಮಾಪ್ತಿ